# ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

ಮಂಡ್ಯ – 571 401

# MANDYA INSTITUTE OF MEDICAL SCIENCES

MANDYA -571 401

(Autonomous Medical Institution, Government of Karnataka)

Phone & Fax : 08232-231001
Director : 08232-222086
CAO : 08232-231197
FA : 08232-401198

E.Mail Address:
mimsmandya@gmail.com


ಸಂಖ್ಯೆ: ಮಿಮ್ಸ್ ಕಟ್ಟಡ/ಇಟಿಪಿ/2012-13 ದಿನಾಂಕ:

ದಿನಾಂಕ:09-12-2013 ರಂದು ಮಧ್ಯಾಹ್ನ 3.00 ಗಂಟೆಗೆ ಸರ್ಕಾರದ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ(ವೈದ್ಯಕೀಯ ಶಿಕ್ಷಣ), ಇವರ ಅಧ್ಯಕ್ಷತೆಯಲ್ಲಿ ಕೊಠಡಿ ಸಂಖ್ಯೆ 133 ವಿಕಾಸಸೌಧ, ಬೆಂಗಳೂರು ಜರುಗಿದ ಖರೀದಿ ಸಮಿತಿ ಸಭೆಯ ಸಭಾ ನಡಾವಳಿಗಳು.

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಹಾಜರಿದ್ದ ಸರ್ಕಾರದ ಕಾರ್ಯದರ್ಶಿಗಳನ್ನು ಹಾಗೂ ಇತರೆ ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು.

ಖರೀದಿ ಸಮಿತಿ ಸಭೆಯಲ್ಲಿ ಈ ಕೆಳಕಂಡ ಸದಸ್ಯರುಗಳು ಹಾಜರಿದ್ದರು.

| | | |
|---|---|---|
| 1. | ಸರ್ಕಾರದ ಕಾರ್ಯದರ್ಶಿಗಳು, ಆಕುಕ (ವೈದ್ಯಕೀಯ ಶಿಕ್ಷಣ) | ಅಧ್ಯಕ್ಷರು |
| 2. | ನಿರ್ದೇಶಕರು ಮಿಮ್ಸ್ ಮಂಡ್ಯ | ಉಪಾಧ್ಯಕ್ಷರು |
| 3. | ವೈದ್ಯಕೀಯ ಅಧೀಕ್ಷಕರು ಮಿಮ್ಸ್ ಮಂಡ್ಯ | ಸದಸ್ಯರು |
| 4. | ಮುಖ್ಯಆಡಳಿತಾಧಿಕಾರಿಗಳು ಮಿಮ್ಸ್ ಮಂಡ್ಯ | ಸದಸ್ಯರು |
| 5. | ಆರ್ಥಿಕ ಸಲಹೆಗಾರರು ಮಿಮ್ಸ್ ಮಂಡ್ಯ | ಸದಸ್ಯ ಕಾರ್ಯದರ್ಶಿಗಳು |

**ವಿಷಯ ಸಂಖ್ಯೆ: I ದ್ರವ್ಯತ್ಯಾಜ್ಯ ಘಟಕ ಸ್ಥಾಪನೆ ಕಾಮಗಾರಿ ಟೆಂಡರ್‌ಗೆ ಅನುಮೋದನೆ ನೀಡುವ ಕುರಿತು.**

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕಾಲೇಜು ಮತ್ತು ಆವರಣದಲ್ಲಿನ ಇತರೆ ಕಟ್ಟಡಗಳು ಸೇರಿದಂತೆ ಎಲ್ಲ ತ್ಯಾಜ್ಯ ನೀರನ್ನು ಸಂಸ್ಕರಿಸಲು ರಾಜ್ಯ ಪರಿಸರ ನಿಯಂತ್ರಣ ಮಂಡಳಿಯ ಕಾಯ್ದೆಯಂತೆ ದ್ರವ್ಯತ್ಯಾಜ್ಯ ಘಟಕ ಸ್ಥಾಪಿಸಲು ಈ ಕಛೇರಿ ಪತ್ರ ಸಂಖ್ಯೆ: ಮಿಮ್ಸ್ ಕಟ್ಟಡ/ಇಟಿಪಿ/ಎಸ್‌ಟಿಪಿ/2012-13 ದಿ:20.03.2013ರಂತೆ ಟೆಂಡರ್ ಕರೆಯಲಾಗಿದ್ದು, ಕೆಟಿಪಿಪಿ ನಿಯಮಗಳನ್ನು (ಆಕ್ಟ್) ಪಾಲಿಸಿ

ದಿನಾಂಕ:10.09.2013ರಂದು ತಾಂತ್ರಿಕ (ಟೆಕ್ನಿಕಲ್) ಬಿಡ್‌ಗಳನ್ನು ತೆರೆಯಲಾಯಿತು.(ವಿವರವಾದ ವರದಿ ಲಗತ್ತಿಸಿದೆ)

ಬಿಡ್‌ನಲ್ಲಿ ಈ ಕೆಳಕಂಡ ಸಂಸ್ಥೆಯವರು ಬಾಗವಹಿಸಿದ್ದರು.

1. ಮೆ॥ ಓಯಸೀಸ್ ಇ.ಪಿ.ಸಿ. ಸಲ್ಯೂಷನ್ಸ್(ಪ್ರೈ) ಲಿ. ಅಹಮದಾಬಾದ್
2. ಮೆ॥ ಯೂರೋಟೆಕ್ ಎನ್ವಿರಾನ್ಮೆಂಟಲ್ (ಪ್ರೈ) ಲಿ  ವಡೋದರ
3. ಮೆ॥ ಅಕ್ವಾ ಟೆಕ್ ಎನ್ವಿರೋ ಇಂಜಿನಿಯರ್ಸ್ - ಬೆಂಗಳೂರು
4. ಮೆ॥ ಲಾರ್ಸ್ ಎನ್ವಿರೋ ಪ್ರೈ.ಲಿ., ನಾಗಾಪುರ.
5. ಮೆ॥ ಅಕ್ವಾ ಕೆಂ-ಟೆಕ್ ಇಂಟರ್‌ನ್ಯಾಷನಲ್, ಬೆಂಗಳೂರು,

ದಿನಾಂಕ: 25.09.2013ರಂದು ಎಲ್ಲಾ ಬಿಡ್‌ದಾರರ ಸಮ್ಮುಖದಲ್ಲಿ ಟೆಂಡರ್‌ನ್ನು ತುಲನೆ ಮಾಡಿದ್ದು, ಅಂತಿಮವಾಗಿ ಈ ಕೆಳಕಂಡ ಟೆಂಡರ್‌ದಾರರನ್ನು ಟೆಂಡರ್ ಪರಿಶೀಲನಾ ಸಮಿತಿಯು ಆಯ್ಕೆಮಾಡಿತು.

1. ಮೆ॥ ಲಾರ್ಸ್ ಎನ್ವಿರೋ ಪ್ರೈ.ಲಿ., ನಾಗಾಪುರ
2. ಮೆ॥ ಅಕ್ವಾ ಕೆಂ-ಟೆಕ್ ಇಂಟರ್‌ನ್ಯಾಷನಲ್, ಬೆಂಗಳೂರು,

ಸದರಿ ಸಂಸ್ಥೆಗಳ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗಿ ಮೆ॥ ಅಕ್ವಾ ಕೆಂ-ಟೆಕ್ ಇಂಟರ್‌ನ್ಯಾಷನಲ್, ಬೆಂಗಳೂರು, ರವರು ರೂ.1,42,80,000/- ನಮೂದಿಸಿದ್ದು ಎಲ್-1 ಆಗಿರುತ್ತಾರೆ. ಸಂದಾನ ಪ್ರಕ್ರಿಯೆ ನಂತರ ಸದರಿಯವರು ರೂ.1,42,08,600/- ಗಳಿಗೆ ಕಾಮಗಾರಿ ನಿರ್ವಹಿಸಲು ಒಪ್ಪಿಕೊಂಡಿರುವುದನ್ನು ಟೆಂಡರ್ ಸಮಿತಿ ಸಭೆಯು ಒಪ್ಪಿ ಅನುಮೋದಿಸಿತು. ಹಾಗೂ ಮೆ॥ ಅಕ್ವಾ ಕೆಂ-ಟೆಕ್ ಇಂಟರ್‌ನ್ಯಾಷನಲ್, ಬೆಂಗಳೂರು, ರವರಿಗೆ ಕಾರ್ಯದೇಶ ನೀಡಲು ಸರ್ಕಾರದ ಅನುಮೋದನೆ ಪಡೆಯಲು ತೀರ್ಮಾನಿಸಿದುದನ್ನು ಒಪ್ಪಿ ಸಮಿತಿಯು ಅನುಮೋದಿಸಿತು.

**ವಿಷಯ ಸಂಖ್ಯೆ: II 2013-14ನೇ ಸಾಲಿಗೆ ಭದ್ರತಾ ಸಿಬ್ಬಂದಿಗಳನ್ನು ನೇಮಿಸುವ ಟೆಂಡರ್ ಕುರಿತು.**

ಸದರಿ ಟೆಂಡರ್‌ಗೆ ಸಂಬಂಧಿಸಿದಂತೆ ಇಬ್ಬರು ಗುತ್ತಿಗೆದಾರರು ಸಲ್ಲಿಸಿರುವ ಆರ್ಥಿಕ ಬಿಡ್‌ನ್ನು ಪರಿಶೀಲಿಸಲಾಗಿ ಕ್ರಮವಾಗಿ ಒಂದೇ ರೀತಿಯ ದರ ನಮೂದಿಸಿರುವುದನ್ನು ಸಭೆಯು ಗಮನಿಸಿತು.

ಇ-ಟೆಂಡರ್ ನಿಯಮಾನುಸಾರ ಒಂದೇ ದರ ನಮೂದಿಸಿದಲ್ಲಿ ಯಾವ ರೀತಿ ಕ್ರಮ ವಹಿಸಬೇಕು ಎಂಬ ಬಗೆಗೆ ವಿವರಣೆ ಇರುವುದಿಲ್ಲ. ಈ ಸಂಬಂಧವಾಗಿ ಆರ್ಥಿಕ ಇಲಾಖೆಯವರೊಡನೆ ಚರ್ಚಿಸಲಾಗಿದೆ. ಈ ಹಿನ್ನಲೆಯಲ್ಲಿ ಬಿಡ್‌ದಾರರು ನಮೂದಿಸಿರುವ ದರಗಳು ಒಂದೇ ಸಮನಾಗಿರುವುದರಿಂದ ಸದರಿ ಟೆಂಡರ್‌ನ್ನು ರದ್ದುಪಡಿಸಲು ಸಮಿತಿ ಸಭೆಯು ತೀರ್ಮಾನಿಸಿ ಅನುಮೋದಿಸಿತು.

ಅಲ್ಪಾವಧಿ ಮರು ಟೆಂಡರ್ ಕರೆಯಲು ಸಭೆಯು ತೀರ್ಮಾನಿಸಿ ಅನುಮೋದಿಸಿತು.

ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

| | | | |
|---|---|---|---|
| ಆರ್ಥಿಕ ಸಲಹೆಗಾರರು<br>ಮಿಮ್ಸ್ ಮಂಡ್ಯ | ಮುಖ್ಯಆಡಳಿತಾಧಿಕಾರಿಗಳು,<br>ಮಿಮ್ಸ್ ಮಂಡ್ಯ | ವೈದ್ಯಕೀಯ ಅಧೀಕ್ಷಕರು<br>ಮಿಮ್ಸ್ ಮಂಡ್ಯ | ನಿರ್ದೇಶಕರು,<br>ಮಿಮ್ಸ್ ಮಂಡ್ಯ |

ಸರ್ಕಾರದ ಕಾರ್ಯದರ್ಶಿಗಳು,
ಖರೀದಿ ಸಮಿತಿ ಅಧ್ಯಕ್ಷರು,
ಮಿಮ್ಸ್ ಮಂಡ್ಯ